ಸರ್ಕಾರ ಮತ್ತು ಅಪೆಕ್ಸ್ ಬ್ಯಾಂಕು ಭರಿಸಿಕೊಟ್ಟಿರುತ್ತವೆ. ಉಳಿದ 12.50 ಕೋಟಿ ರೂ.ಗಳನ್ನು ಬ್ಯಾಂಕು ಭರಿಸಬೇಕಾಗಿರುತ್ತದೆ.

ಇ) ಸೂಕ್ತ ಸಮಯದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣೆ ಮಾಡಲಾಗುವುದು.

1201 (1284) ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಸ್ಥೆಗಳೆಷ್ಟು;

ಆ) ಆ ಪೈಕಿ ಲಾಭ ಹಾಗೂ ನಷ್ಟದಲ್ಲಿರುವ ಸಂಸ್ಥೆಗಳೆಷ್ಟು (ವಿವರ ನೀಡುವುದು);

ಇ) ನಷ್ಟದಲ್ಲಿರುವ ಸಂಸ್ಥೆಗಳ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) 32,997

ಆ) ಲಾಭದಲ್ಲಿರುವ ಸಹಕಾರ ಸಂಸ್ಥೆಗಳು 16,043
ನಷ್ಟದಲ್ಲಿರುವ ಸಹಕಾರ ಸಂಸ್ಥೆಗಳು 16,954

ಇ)

1) ಸಂಸ್ಥೆಗಳ ಆಡಳಿತ ಮಂಡಳಿಗಳನ್ನು ರದ್ದುಪಡಿಸಿ ಆಡಳಿತಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.
2) ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ.
3) ಸಾಲ ವಸೂಲಾತಿಗಾಗಿ ವಿಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ.
4) ಸಂಸ್ಥೆಗಳ ಕೋರಿಕೆ ಮೇರೆಗೆ ಸಂಸ್ಥೆಗಳ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸ ಲಾಗಿದೆ.
5) ಆರ್ಥಿಕ ಸಬಲತೆ ಹೊಂದಲು ಅವಕಾಶವಿರುವಂತಹ ಸಂಘಗಳಿಗೆ ಶೇರುಧನವನ್ನು ಮಂಜೂರು ಮಾಡಲಾ ಗುತ್ತಿದೆ.

6) ವೈದ್ಯನಾಥನ್ ಕಮಿಟಿಯ ಶಿಫಾರಸ್ಸಿನ ಪ್ರಕಾರ ಪ್ರಾಥಮಿಕ ಸಹಕಾರ ಪತ್ತಿನ ಸಂಸ್ಥೆಗಳಿಗೆ ಹಣಕಾಸು ನೆರವು ನೀಡಲು ಯೋಜನೆ ತಯಾರಿಸಲಾಗುತ್ತಿದೆ.

7) ಅಲ್ಲದೆ ತೀರ ನಷ್ಟದಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಅದರಲ್ಲೂ ಧಾರವಾಡ ಜಿಲ್ಲೆ, ಕೋಲಾರ ಮತ್ತು ಬೆಂಗಳೂರು ಜಿಲ್ಲೆ ಹಾಗೂ ಬೆಂಗಳೂರು (ಗ್ರಾ) ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ವಿಶೇಷ ಸವಲತ್ತುಗಳನ್ನು ನೀಡಿ ಬಡ್ಡಿ ಮನ್ನಾ ಮಾಡಲಾಗಿದೆ.

8) ಅಪೆಕ್ಸ್ ಬ್ಯಾಂಕಿನ ಸ್ವಂತ ಬಂಡವಾಳದಿಂದ ಬೆಳೆಸಾಲ ನೀಡಲಾಗುತ್ತಿದೆ.

9) ವ್ಯಾಪಾರಭಿವೃದ್ಧಿ ಯೋಜನೆ (ಬಿಡಿಪಿ)ಯನ್ನು ಅಳವಡಿಸಿ ಸಂಘಗಳಿಗೆ ಬ್ಯಾಂಕಿನ ಕೌಂಟರ್ ನೀಡಲು ಹಣಕಾಸು ಒದಗಿಸಲಾಗುತ್ತಿದೆ.

10) ಸಿಬ್ಬಂದಿಗಳಿಗೆ ಮತ್ತು ಆಡಳಿತ ಮಂಡಳಿಯವರಿಗೆ ಸಂಘಗಳನ್ನು ಲಾಭದಾಯಕವಾಗಿ ನಡೆಸಲು ಅನುವಾಗುವಂತೆ ತರಬೇತಿ ನೀಡಲಾಗುತ್ತಿದೆ.

11) ಸಂಘಗಳ ಸ್ವಂತ ಬಂಡವಾಳ ಹೆಚ್ಚಿಸಲು ಸಹಕಾರ ಸಂಘಗಳಲ್ಲಿ ಸ್ತ್ರೀ ಶಕ್ತಿ ಗುಂಪುಗಳು ಮತ್ತು ಸ್ವಸಹಾಯ ಗುಂಪುಗಳನ್ನು ಸದಸ್ಯರಾಗಿ ಮಾಡಲಾಗುತ್ತಿದೆ.

12) ಸಂಘಗಳ ಶೇರುಬಂಡವಾಳ ಹೆಚ್ಚಿಸುವ ಸಲುವಾಗಿ ಪರಿಶಿಷ್ಟ ಜಾತಿ/ಪಂಗಡ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರನ್ನು ಸದಸ್ಯರನ್ನಾಗಿ ಮಾಡಿ ಅವರ ಶೇರು ಮೊಬಲಗನ್ನು ಸರ್ಕಾರವೇ ಭರಿಸುತ್ತಿದೆ.

1202 (1516) ಶ್ರೀ ರವಿ. ಸಿ.ಟಿ.(ಚಿಕ್ಕಮಗಳೂರು) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಳೆ ಬಿಪಿಎಲ್ ಪಡಿತರ ಕಾರ್ಡುದಾರರಿಗೆ ಸ್ವೀಕೃತಿ ಪತ್ರದ ಆಧಾರದ ಮೇಲೆ ಪಡಿತರ ನೀಡುತ್ತಿದ್ದನ್ನು ನಿಲ್ಲಿಸಿರುವುದರಿಂದ ಬಡಜನರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?